


ಮಲನ್ ಮತ್ತು ಮಿನ್ನಿಯನ್ನು ತಾಯಿ–ಮಗಳೆಂದು ಯಾರೂ ನಂಬುತ್ತಿರಲಿಲ್ಲ. ಅವರು ಅಕ್ಕತಂಗಿಯರಂತೆ ಕಾಣುತ್ತಿದ್ದರು. ಮಿನ್ನಿಯು ಅವಳ ತಾಯಿಗಿಂತ ಕೊಂಚ ಎತ್ತರವಾಗಿದ್ದಳು. "ಮಲನ್, ನಿನ್ನ ಮಗಳು, ಅಂದಗಾತಿ ಹೆಣ್ಣಾಗಿ ಬೆಳೆದಿದ್ದಾಳೆ" ಎಂದು ಜನರು ಹೇಳುತ್ತಿದ್ದರು.

ಮಗಳೆಡೆಗೆ ನೋಡಿದಾಗ, ತನ್ನನ್ನೇ ಕನ್ನಡಿಯಲ್ಲಿ ನೋಡಿದಂತೆ ಮಲನ್‌ಳಿಗೆ ಭಾಸವಾಗುತ್ತಿತ್ತು. ಅವಳಿಗೂ ಜಾಸ್ತಿಯೇನೂ ವಯಸ್ಸಾಗಿರಲಿಲ್ಲ. ಈ ವಯಸ್ಸಿನಲ್ಲೂ ಮಲನ್‌ಗಾಗಿ ಏನನ್ನಾದರೂ ಮಾಡಲು ತಯಾರಾಗಿದ್ದ ಒಬ್ಬನಿದ್ದ.

ಅವಳ ಮನಸ್ಸು ಏಕೆ ಅವನೆಡೆಯೇ ಸುತ್ತುತ್ತಿದೆ? ತನ್ನ ಮಗಳು ಬೆಳೆದಿದ್ದಾಳೆ; ಈಗ ಪುರಪುರುಷನ ಕುರಿತು ಯೋಚಿಸುವುದೂ ಅನುಚಿತವಾಗುತ್ತದೆ. ಇಷ್ಟೆಲ್ಲಾ ವರ್ಷ ಅವಳು ತನ್ನನ್ನು ತಾನೇ ನಿಗ್ರಹಿಸಿಕೊಂಡಿದ್ದಳು. ಈಗೇಕೆ ತನ್ನ ಮನ ಚಂಚಲವಾಗುತ್ತಿದೆ? ಮಗಳು ಇನ್ನೊಂದು ವಾರದಲ್ಲಿ ಮದುವೆಯಾಗುತ್ತಾಳೆ. ಇಂತಹ ಕೆಟ್ಟ ಯೋಚನೆಗಳಿಗೆಲ್ಲಾ ಆಸ್ಪದ ನೀಡಬಾರದು. ಇಲ್ಲ, ಎಂದಿಗೂ ಇಲ್ಲ... ಅವಳು ತನಗೆ ತಾನೇ ಹೇಳಿಕೊಂಡಳು.

ನಿನ್ನೆ ತಾನೇ ಅವನು ಬರೆದಿದ್ದ, "ನನ್ನವಳೇ ನನ್ನ ಪ್ರಿಯತಮೆಯೇ, ನನ್ನನ್ನು ಮರೆತುಬಿಡಬೇಡ". ಆದರೆ, ಅವನು ಪ್ರತಿ ಬಾರಿ ಹಳ್ಳಿಗೆ ಬಂದಾಗಲೆಲ್ಲಾ ಮನೆಯ ಬಾಗಿಲನ್ನು ಅವನೆದುರಲ್ಲಿ ಮುಚ್ಚಿದಷ್ಟೇ ವೇಗವಾಗಿ ತನ್ನ ಕಣ್ಣುಗಳನ್ನು ಮುಚ್ಚಿಬಿಡುತ್ತಿದ್ದಳು. ಆದರೆ, ಅವಳನ್ನು ಬಿಡಲು ಅವನು ನಿರಾಕರಿಸುತ್ತಿದ್ದ. ಅವಳು ಅವನ ಜೀವವೇ ಆಗಿದ್ದಳು; ಅವಳಿಲ್ಲದೆ ಅವನಿಗೆ ಶಾಂತಿಯಿರಲಿಲ್ಲ, ಅವಳಿಗಾಗಿ ಹಲವಾರು ವರ್ಷಗಳಿಂದ ಕಾಯುತ್ತಲೇ ಇದ್ದ, ಬೇಡಿಕೊಂಡಿದ್ದ. ಪ್ರೇಮ–ಕಾಮದ ತಾಪದಲ್ಲಿ ಯಾತನೆಗೊಂಡಿದ್ದ.

ಅವನು ಈ ರಾತ್ರಿ ಬರುತ್ತಾನೆಂದು ಮಲನ್‌ಳ ಹೃದಯಕ್ಕೆ ಗೊತ್ತಿತ್ತು. ಕಾರ್ತಿಕದ ಪ್ರತಿ ಹುಣ್ಣಿಮೆಯ ರಾತ್ರಿಗಳಂದು, ಅವಳ ಮನೆಬಾಗಿಲು ತಟ್ಟುತ್ತಿದ್ದ. ಇಂದಿನ ಪೂರ್ಣ ಚಂದಿರನ ರಾತ್ರಿ, ಶೀತಲ ಚಳಿಯಿಂದ ನಿಶ್ಚಲವಾಗಿತ್ತು. ಅವನಿಗಾಗಿ ಅವಳೆಂದೂ ಬಾಗಿಲನ್ನು ತೆಗೆದಿರಲಿಲ್ಲ. ಈ ರಾತ್ರಿ ತೆಗೆಯುತ್ತಾಳೆಯೇ? ಬಹಳ ವರ್ಷಗಳ ಹಿಂದೆ, ಶೀತಲ ಚಂದಿರನಿದ್ದ ರಾತ್ರಿಯನ್ನು ಅವಳು ನೆನಪಿಸಿಕೊಂಡಳು. ಮಾವಿನ ತೋಟದಲ್ಲಿ ಅವಳು ನರ್ತಿಸುತ್ತಿದ್ದಾಗ, ಅವಳ ದುಪ್ಪಟ್ಟಾ ಅವನ ಕೈಗೆ ಸಿಕ್ಕಿಹಾಕಿಕೊಂಡಿತ್ತು. ಚಂದ್ರನ ಬೆಳಕು ಮಲ್ಲಿಗೆಯ ದಳದಂತೆ ಅವಳ ಮುಖವನ್ನು ಬೆಳಗುತ್ತಿದ್ದಾಗ, ಅವಳು, ಅವನೆಡೆಗೆ ಸಾಗಿಬಂದಿದ್ದಳು. ಅವನು ಅವಳ ಭುಜಗಳ ಮೇಲೆ ದುಪ್ಪಟ್ಟಾ ಹೊದಿಸಿದ್ದ–ಇಂದು ಅವಳು ದುಪ್ಪಟ್ಟಾವನ್ನು ಹೊದ್ದಿದ್ದ ರೀತಿಯಲ್ಲೇ. ಮಲನ್‌ಳ ಬೆನ್ನುಹುರಿಯಿಂದ ನಡುಕವೊಂದು ಹರಿದುಬಂತು.

ಮಿನ್ನಿಯು ಓಣಿಯಿಂದ ನಡೆದುಕೊಂಡು ಬಂದಳು. ಸೂಚಿಪರ್ಣ ಮರದಂತೆ ತೆಳ್ಳಗೆ, ಎತ್ತರವಾಗಿದ್ದಳು. ಮನುಷ್ಯನ ಕೈ ಸೋಕಿದರೆ ಕಲೆಯಾದೀತೇನೋ ಎಂಬಂತೆ ಬೆಳ್ಳಗೆ ಹೊಳೆಯುತ್ತಿದ್ದಳು. ತಲೆಯ ಮೇಲೆ ಗೌರವಯುತವಾಗಿ ದುಪ್ಪಟ್ಟಾ ಹೊದ್ದು, ತಲೆ ತಗ್ಗಿಸಿ, ನೆಲ ನೋಡುತ್ತಾ ಬರುತ್ತಿದ್ದಳು. ಮಿನ್ನಿ, ದೇವಸ್ಥಾನದಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ಹಿಂದಿರುಗುತ್ತಿದ್ದಳು. ಎಲ್ಲರ ಇಷ್ಟಾರ್ಥಗಳೂ ಸಿದ್ಧಿಯಾಗಲಿ ಎಂದು ಪ್ರಾರ್ಥಿಸಿದ್ದಳು.

ಯಾವುದೋ ಕಲ್ಪನೆಯು ಮಲನ್‌ಳ ಕಾಮನೆಗಳನ್ನು ಬಡಿದೆಬ್ಬಿಸಿತು. ತನ್ನ ಆಸೆಯೂ ಪೂರೈಸುವುದಾದರೆ, ತಾನೇನು ದೇವರಲ್ಲಿ ಬೇಡಬಹುದೆಂದು, ಅವಳು ತನ್ನಲ್ಲೇ ಯೋಚಿಸಿ, ನಕ್ಕಳು.

"ಅಪ್ಪ ಬರಲೇ ಇಲ್ಲ" ಮಿನ್ನಿ ದೂರಿದಳು. "ಅವರು ಇವತ್ತು ಬರುವುದಿಲ್ಲ; ನಾಳೆಯಾದೂ ಬಂದರೆ ಅದೇ ನಮ್ಮ ಭಾಗ್ಯ. ಅವರು ಬಹಳಷ್ಟು ಖರೀದಿಸಬೇಕು. ಮದುವೆ ಮುಂಜಿಗಳಲ್ಲಿ ಕೊರತೆಯಾಗುವುದಕ್ಕಿಂತ